# ನನ್ನ ಅನುಭವದಲ್ಲಿ ಗ್ರಾಮಾಭಿವೃದ್ಧಿ

ಡಾ. ಆರ್. ಬಾಲಸುಬ್ರಮಣ್ಯಂ

**ವರಮಾನದ ಹೆಚ್ಚಳ ಆಂತರಿಕ ಅಭಿವೃದ್ಧಿಯ ಅಂತಿಮ ಪರಿಣಾಮ ಮಾತ್ರವೇ ಹೊರತು, ಅದೇ ವಿಕಾಸದ ಸೂಚಕವಾಗಲಿ, ಅಭಿವೃದ್ಧಿಪ್ರೇರಕವಾಗಲೀ ಅಲ್ಲ. ಯಾವ ದೇಶದಲ್ಲಿ ಸರ್ವಾಂಗೀಣ ಬೆಳವಣಿಗೆಯ ಯಂತ್ರ ಆಂತರಂಗಿಕವಾಗಿದೆಯೋ ಆ ದೇಶವನ್ನು ಮಾತ್ರ ಅಭಿವೃದ್ಧಿಶೀಲ ಎನ್ನುವುದು ಸಮಂಜಸವಾಗುತ್ತದೆ. –*ಡಬ್ಲ್ಯು. ಎ.ಲೇವಿಸ್.***

## ಗ್ರಾಮದತ್ತ ಒಲವು

ಗ್ರಾಮೀಣ ಅಭಿವೃದ್ಧಿಯಲ್ಲಿ ನನ್ನದು ಗ್ರಾಮ್ಯ ಅನುಭವ. ಇದು ಹಳ್ಳಿಗಳೊಂದಿಗಿನ ನನ್ನ ಒಡನಾಟ, ನನ್ನ ಬದುಕು ಹಾಗೂ ದೃಷ್ಟಿಕೋನವನ್ನು ಗ್ರಾಮೀಣ ಪ್ರದೇಶದೆಡೆಗೆ ಒಲಿಯುವಂತೆ ಮಾಡಿದ ಮಹನೀಯರಿಬ್ಬರ ಪ್ರಭಾವಿ ಚಿಂತನೆಗಳ ಆಧಾರದ ಮೇಲೆ ರೂಪುಗೊಂಡಿದೆ. ಈ ದೇಶ ಕಂಡ ಅದ್ಭುತ ಸಂತ ಹಾಗೂ ಗ್ರಾಮೀಣ ಭಾರತದ ಅಭಿವೃದ್ಧಿ ಸ್ವಾವಲಂಬನೆಯಿಂದಲೇ ಸಾಧ್ಯ ಎಂಬ ಚಿಂತನೆಯನ್ನು ನೀಡಿದ ಸ್ವಾಮಿ ವಿವೇಕಾನಂದರು ಹಾಗೂ ಅಧಿಕಾರ ವಿಕೇಂದ್ರೀಕರಣ ಮತ್ತು ಗ್ರಾಮ ಸರ್ಕಾರಗಳ ಮೂಲಕ ಗ್ರಾಮಾಭಿವೃದ್ಧಿ ಎಂಬ ಧ್ಯೇಯಮಂತ್ರವನ್ನು ಕೊಟ್ಟ ವಾಸ್ತವವಾದಿ ಮಹಾತ್ಮ ಗಾಂಧಿಯವರು ನನ್ನ ಮೇಲೆ ಬಹಳವಾಗಿ ಪ್ರಭಾವ ಬೀರಿದ್ದಾರೆ. ಅದರಲ್ಲೂ ಮುಖ್ಯವಾಗಿ ಸ್ವಾಮಿ ವಿವೇಕಾನಂದರ "ಸ್ವಾವಲಂಬನೆಯ ಚಿಂತನೆಯಿಂದ ಹೊರತಾದ ಭಾರತದ ಒಂದು ಪುಟ್ಟ ಹಳ್ಳಿಗೆ ಪ್ರಪಂಚದ ಎಲ್ಲಾ ಸಂಪತ್ತನ್ನು ತಂದು ಸುರಿದರೂ ಏನೂ ಬದಲಾವಣೆಯಾಗದು" ಎಂಬ ಹೇಳಿಕೆ ನನ್ನನ್ನು ಈ ದಿಸೆಯಲ್ಲಿ ಚಿಂತಿಸುವಂತೆ ಮಾಡಿದೆ.

## ಅಭಿವೃದ್ಧಿ ಎಂಬ ಎರವಲು

ನಾನು ನೇರವಾಗಿ ಅಭಿವೃದ್ಧಿಯ ಕುರಿತಂತೆ ಜನಸಾಮಾನ್ಯರ ಹಾಗೂ ಸರ್ಕಾರದ ನಿಲುವುಗಳ ವಿಚಾರಕ್ಕೆ ಬರುತ್ತೇನೆ. ಇಂದು ಅಭಿವೃದ್ಧಿಯನ್ನು ಕೇವಲ ಆರ್ಥಿಕ ವಿಚಾರಗಳ ಮೇಲೆ ಅಳೆಯುತ್ತೇವೆ. ಆದರೆ 'ಇದಲ್ಲ', 'ಇಷ್ಟೇ ಅಲ್ಲ' ಎಂಬುದು ಆ ಸಮುದಾಯಗಳನ್ನು ಹತ್ತಿರದಿಂದ ಗಮನಿಸಿದ ನನಗೆ ಹಾಗೂ ಎಲ್ಲರಿಗೂ ತಿಳಿದ ಹಾಗೂ ತಿಳಿಯುವ ಅಂಶವಾಗಿದೆ.

ಅಭಿವೃದ್ಧಿ ಎಂಬುದು ತನ್ನ ಅವಿಭಾಜ್ಯ ಅಂಗ ಎಂದು ಸರ್ಕಾರಿ ವ್ಯವಸ್ಥೆಯ ನಿಲುವು. ಸಾಮಾನ್ಯ ಪ್ರಜೆಯೊಬ್ಬ ತಾನೇ ಮಾಡಿಕೊಳ್ಳಬಹುದಾದ ಚಟುವಟಿಕೆಗಳಿಗೂ ನಾವಿಂದು ಯೋಜನೆಗಳನ್ನು ರೂಪಿಸುತ್ತಿದ್ದೇವೆ. ಈ ಯೋಜನೆಗಳ ರೂಪುರೇಷೆ ನಗರದ ವಿದ್ಯಾವಂತ ಜನರಿಂದ ಮಾತ್ರ ಸಾಧ್ಯ ಎಂಬುದೊಂದು ಭ್ರಮೆ ನಮ್ಮೆಲ್ಲರಲ್ಲೂ ಮನೆಮಾಡಿದೆ. ಹಳ್ಳಿಗಳ ಅಭಿವೃದ್ಧಿಯಲ್ಲಿ ಇದು ಎರವಲು ಪಡೆದ ಜ್ಞಾನದಂತಾಗುತ್ತಿದೆ. ಈ ಮನೋಭಾವನೆಯಿಂದಲೇ ಹಳ್ಳಿಗಳ ಅಭಿವೃದ್ಧಿಗೆ ಸಮರ್ಪಕ ಯೋಜನೆ ನೀಡಬಹುದಾದ ಹಳ್ಳಿಗರ ಜ್ಞಾನವನ್ನು ಕಡೆಗಣಿಸಿದ್ದೇವೆ. ಸರ್ಕಾರದ ಯೋಜನೆಯಲ್ಲಿರುವ ಕೇವಲ ಸೌಲಭ್ಯಗಳನ್ನೇ ಆಧರಿಸಿದ ಯೋಜನೆಯನ್ನು ಜಾರಿಗೊಳಿಸುತ್ತಿದ್ದೇವೆ. ಇದು ನನ್ನ ಅನಿಸಿಕೆಯಲ್ಲಿ, ನೈಜ ಅಭಿವೃದ್ಧಿಯಲ್ಲ, ಕೇವಲ ಅವಲಂಬನೆಯ ಸೃಷ್ಟಿ. ನಮ್ಮಲ್ಲಿರುವ ಯೋಜನೆಗಳ ಪೂರೈಕೆಗೆ ಹಳ್ಳಿಗಳಲ್ಲಿ ಬೇಡಿಕೆಯನ್ನು ಹುಡುಕಿಕೊಳ್ಳುತ್ತಿದ್ದೇವೆ. ಉದಾ: ಕೆಲವು ಬ್ಯಾಂಕುಗಳು ತಮಗೆ ನಿಗದಿ ಪಡಿಸಿದಷ್ಟು ಸಾಲ ಪೂರೈಸಲು ರೈತರನ್ನು ಹುಡುಕಿ ಸಾಲ ನೀಡುತ್ತವೆ. ಪೂರೈಕೆಯಲ್ಲಿನ ಉತ್ಸಾಹ, ಅದರ ಹಿಂದಿನ ಉದ್ದೇಶದ ಈಡೇರಿಕೆಯಾಗಿರುವುದರ ಕುರಿತು ಇಲ್ಲದಿರುವುದು ಯೋಜನೆಯ ವಿಫಲತೆಗೆ ಕಾರಣವಾಗುತ್ತದೆ. ತಮ್ಮ ಯೋಜನೆಯ ಗುರಿಯಷ್ಟೆ ಇವರಿಗೆ ಮುಖ್ಯವಾಗಿರುತ್ತದೆ. ವಿವಿಧ ಇಲಾಖೆಗಳು ತಮ್ಮ ಯೋಜನೆಗಳನ್ನು ಹಳ್ಳಿಗಳಲ್ಲಿ ಮಾರಾಟಕ್ಕಿಟ್ಟಿವೆ. ಜನರ ಆವಶ್ಯಕತೆಗಳನ್ನು ಅರಿತುಕೊಳ್ಳದೆ ಯೋಜನೆಗಳನ್ನು ಜಾರಿಗೊಳಿಸಿ, ಜನಸಮಾನ್ಯರು ಅಗಾಧವಾದ ಸಾಲದ ಹೊರೆಯನ್ನು ಹೊತ್ತುಕೊಳ್ಳುವಂತೆ ಮಾಡಿವೆ. ಸರ್ಕಾರದ ಈ ಯೋಜನೆಗಳು ಬಡತನವನ್ನು ಸಹಿಸಿಕೊಳ್ಳಲು ನೆರವಾಗುತ್ತಿವೆಯೇ ಹೊರತು ಅದರಿಂದ ಹೊರಬರುವ ಅವಕಾಶಗಳನ್ನು ನೀಡುತ್ತಿಲ್ಲ.

## ಸಹಸ್ಪಂದನ –ಸಹಭಾಗಿತ್ವ

ಹಾಗಿದ್ದರೆ, ಅಭಿವೃದ್ಧಿ ಎಂದರೇನು? "ಅಭಿವೃದ್ಧಿ" ಎಂದರೆ ದೈನಂದಿನ ಬದುಕು ಹಸನಾಗುವುದಷ್ಟೇ ಅಲ್ಲ, ಇದು ಹೊಸ ಅವಕಾಶಗಳ ಸೃಷ್ಟಿಯೂ ಆಗಿದೆ. ಜನರ ಆವಶ್ಯಕತೆಗಳನ್ನು ಆಧರಿಸಿ ಹೊಸ ಹೊಸ ಅವಕಾಶಗಳ ಸೃಷ್ಟಿಯಾಗಬೇಕು. ಈ ಕುರಿತು ಚಿಂತಿಸುವ ಮೊದಲು "ಅಭಿವೃದ್ಧಿ" ಎಂಬ ಪದದ ಸಂದರ್ಭ ಹಾಗೂ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕು. ಇದನ್ನು ಅರಿತುಕೊಳ್ಳಲು ಜನಸ್ಪಂದನ ಬಹಳ ಮುಖ್ಯ. ಇದಕ್ಕಾಗಿ ಅವರೊಂದಿಗೆ ಜೀವಿಸಿ, ಅವರ ಕಷ್ಟಗಳನ್ನು ತಿಳಿದುಕೊಳ್ಳಬೇಕು. ಅವರೊಡನೆ ಒಂದಾದಾಗ ಮಾತ್ರ ಅವರ ಅಗತ್ಯಗಳೇನೆಂಬುದನ್ನು ಅರಿತುಕೊಳ್ಳಲು ಸಾಧ್ಯ. ಅನಂತರ, ಈ ಅನುಭವದ ಆಧಾರದ ಮೇಲೆ ನಾವು ಅವರ ಸಹಭಾಗಿತ್ವವನ್ನು ಪಡೆದುಕೊಂಡು ಅಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

## ಪರಿಪೂರ್ಣ ಭದ್ರತೆ

ಮೇಲೆ ತಿಳಿಸಿದಂತೆ ಅಭಿವೃದ್ಧಿ ಎನ್ನುವುದು ಕೇವಲ

ಸಂಖ್ಯೆಗಳ ಮಾತಲ್ಲ. ಇದು ವ್ಯಕ್ತಿಯ ಬದುಕಿನ ಎಲ್ಲಾ ಆಯಾಮಗಳನ್ನು ಒಳಗೊಳ್ಳಬೇಕು. ಅವನ ದೈನಂದಿನ ಹಾಗೂ ಮುಂದಿನ ಜೀವನಕ್ಕೆ ಅಗತ್ಯವಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಆಧ್ಯಾತ್ಮಿಕ – ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಅವನಿಗೆ ಭದ್ರತೆ ದೊರೆಯಬೇಕು. ಮೂಲಭೂತ ಆವಶ್ಯಕತೆಗಳಾದ ಮನೆ, ಆಹಾರ, ಸ್ವಚ್ಛ ಕುಡಿಯುವ ನೀರು, ಶೌಚಾಲಯ, ರಸ್ತೆ, ಶಿಕ್ಷಣ – ಇವುಗಳನ್ನು ಪ್ರತಿಯೊಬ್ಬ ವ್ಯಕ್ತಿಯೂ ಸರಾಗವಾಗಿ ಪಡೆದುಕೊಳ್ಳುವಂತಹ ವ್ಯವಸ್ಥೆಯಿಂದ ಈ ಭದ್ರತೆ ಸೃಷ್ಟಿಯಾಗ ಬೇಕು. ಸಾಮಾನ್ಯ ಪ್ರಜೆಯ ಆರ್ಥಿಕತೆಗೆ ನಿಲುಕುವ ಶಿಕ್ಷಣ ಹಾಗೂ ಆರೋಗ್ಯ ವ್ಯವಸ್ಥೆ ಸುಲಭದರದಲ್ಲಿ, ಬಡಜನರಿಗೆ ನಿಲುಕುವಂತಿರಬೇಕು. ಈ ಯೋಜನೆಗಳನ್ನು ರೂಪಿಸುವಾಗ ಬಡತನದಿಂದ ಹೊರಬರುವ ಅವಕಾಶಗಳನ್ನು ಹೆಚ್ಚು ಹೆಚ್ಚು ಸೃಷ್ಟಿಸಬೇಕು. ಅಲ್ಲದೆ ಈ ದೇಶದ ಪ್ರಜೆಗಳೆಲ್ಲರೂ ತಮ್ಮ ಸ್ವಾಭಿಮಾನ, ಘನತೆ, ಹಾಗೂ ಆತ್ಮಗೌರವಗಳೊಂದಿಗೆ ಈ ದೇಶದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ರಂಗದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು. ಒಂದು ಹಳ್ಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳಾದ ರಸ್ತೆ, ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಮಾರುಕಟ್ಟೆಗಳ ವ್ಯವಸ್ಥೆಗಳು ಎಲ್ಲರಿಗೂ ಹಳ್ಳಿಗಳ ಪರಿಸರ ದಲ್ಲಿಯೇ ದೊರಕುವಂತಿರಬೇಕು. ಇದಲ್ಲದೆ ವ್ಯಕ್ತಿಯ ಜೀವನ ದಲ್ಲಿ ಮನರಂಜನೆ ಕೂಡ ಅತ್ಯಾವಶ್ಯಕ. ಆದಕಾರಣ ಮನ ರಂಜನೆಗೆ ಸಾಕಷ್ಟು ಅವಕಾಶವನ್ನು ಕಲ್ಪಿಸಿ ಕೊಡಬೇಕು. ಇದ ರೊಂದಿಗೆ ಸಾಮಾಜಿಕ ಪಿಡುಗುಗಳಾದ ಅಸಮಾನತೆ ಮತ್ತು ಜಾತಿವ್ಯವಸ್ಥೆ, ಲಿಂಗತಾರತಮ್ಯಗಳಿಂದ ಮುಕ್ತವಾದ ಸಮಾಜ ವನ್ನು ನಿರ್ಮಿಸಿಕೊಳ್ಳಲು ಅವನಿಗೆ ಸಾಧ್ಯವಾಗಬೇಕು. ಜಾತೀಯತೆಯಿಂದ ಮುಕ್ತವಾದ ಧಾರ್ಮಿಕ ಸಮಾನತೆ ದೊರಕಬೇಕು. ಸ್ವಾಮಿ ವಿವೇಕಾನಂದರೆಂದಂತೆ "ಧಾರ್ಮಿಕ ಸಹಿಷ್ಣುತೆ " ಎಲ್ಲರಲ್ಲೂ ಮೂಡಬೇಕು.

## ಮೂರು ಸೇವೆಗಳು

ಸ್ವಾಮಿ ವಿವೇಕಾನಂದರು ಹೇಳುವಂತೆ, ಮನುಷ್ಯನಿಗೆ ಮೂರು ಸೇವೆಗಳು ಅವಶ್ಯಕ. ಮೊದಲು ದೈಹಿಕ ಸೇವೆ. ಸದೃಢ ದೇಹ ಮತ್ತು ಮನಸ್ಸುಳ್ಳ ವ್ಯಕ್ತಿಯು ಉತ್ತಮ ನಾಳೆಗಳ ಭರವಸೆಯನ್ನು ಹೊಂದಬಹುದೆಂಬ ನಿಟ್ಟಿನಲ್ಲಿ, ದೇಹಪೋಷಣೆಗೆ ಅವಶ್ಯಕವಾದ ಆಹಾರ ಮತ್ತು ಇತರೆ ಅಂಶಗಳ ಭದ್ರತೆಯನ್ನು ನಮ್ಮ ಗ್ರಾಮೀಣ ಜನತೆಗೆ ನೀಡುವುದು ಬಹಳ ಮುಖ್ಯ. ಅನಂತರದ್ದು ಬೌದ್ಧಿಕ ಸೇವೆ. ಇದರಲ್ಲಿ ಜ್ಞಾನವನ್ನು ವಿಸ್ತಾರಗೊಳಿಸುವ ಅವಕಾಶ ಗಳನ್ನು ಕಲ್ಪಿಸಬೇಕು. ಬಳಿಕ ಆಧ್ಯಾತ್ಮಿಕ ಬೆಳವಣಿಗೆ. ಮೇಲಿನ ಎರಡನ್ನೂ ಮಾಡಿದರೆ ಕೊನೆಯದು ತಾನೇ ತಾನಾಗಿ ಒದಗಿ ಬರುತ್ತದೆ. ಈಗಾಗಲೇ ಅಂತರ್ಗತವಾಗಿರುವ ಆಧ್ಯಾತ್ಮಿಕ ಪ್ರಜ್ಞೆ ಹೊರಬರಲು ಅವಕಾಶವಾಗುತ್ತದೆ.

> ಐಶ್ವರ್ಯಹೀನರಾದ, ನಿರ್ಭಾಗ್ಯರಾದ, ವಿವೇಚನಾಶಕ್ತಿಯನ್ನು ಕಳೆದುಕೊಂಡು ಪದದಳಿತರಾದ, ಉಪವಾಸದಿಂದ ನರಳುವ, ಕಾದಾಡಿ ಅಸೂಯೆಪಡುವ ನಮ್ಮ ದೇಶದವರನ್ನು ಪ್ರೀತಿಸಿದರೆ, ಅವರು ಮತ್ತೊಮ್ಮೆ ಮೇಲೆ ಏಳುವರೆಂದು ನಾನು ನಂಬುತ್ತೇನೆ. ನೂರಾರು ಜನ ಉದಾರ ಹೃದಯರಾದ ಸ್ತ್ರೀಪುರುಷರು ಜೀವನದ ಸುಖವನ್ನು ಅನುಭವಿಸಬೇಕೆಂಬ ಆಸೆಯೆಲ್ಲವನ್ನು ತೊರೆದು, ಬಡತನ ಅಜ್ಞಾನ ಕೂಪದಲ್ಲಿ ದಿನೇದಿನೇ ಆಳ ಆಳಕ್ಕೆ ಮುಳುಗುತ್ತಿರುವ ನಮ್ಮ ನಾಡಿನ ಲಕ್ಷಾಂತರ ಜನರ ಹಿತಕ್ಕೋಸುಗವಾಗಿ ತವಕಿಸಿ ಯಾವಾಗ ಕೈಲಾದಮಟ್ಟಿಗೆ ಕಷ್ಟ ಪಡುವರೋ, ಆಗ ಮಾತ್ರ ಭರತಖಂಡ ಮೇಲೆ ಏಳುವುದು.
>
> –ಸ್ವಾಮಿ ವಿವೇಕಾನಂದ (ಕೃ.ಶ್ರೇ.೪.೪೮೫-೪೮೬)

## ಮೌಲ್ಯಾಧಾರಿತ ನಾಯಕತ್ವ

ಇವುಗಳೊಂದಿಗೆ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಎಲ್ಲರಿಗೂ ದೊರೆಯಬೇಕು. ಇದು ಮತದಾನ ಹಾಗೂ ಚುನಾವಣೆಗಳ ಸ್ಪರ್ಧೆಗಷ್ಟೆ ಸೀಮಿತವಾಗಬಾರದು. ಅದರ ಸಂಪೂರ್ಣ ಪ್ರಕ್ರಿಯೆಯಲ್ಲಿ ಮುಕ್ತವಾಗಿ ಪಾಲ್ಗೊಳ್ಳಲು ಅವಕಾಶ ನೀಡಬೇಕು. ಆದರೆ ಇದು ಮೌಲ್ಯ ಹಾಗೂ ಆದರ್ಶದ ಹಿನ್ನೆಲೆಯಲ್ಲಿ ರೂಪುಗೊಳ್ಳಬೇಕು. ಮೌಲ್ಯಾಧಾರಿತ ನಾಯಕತ್ವವು ಮೌಲ್ಯಾಧಾರಿತ ಅಭಿವೃದ್ಧಿಗೆ ಅಡಿಪಾಯ ಎಂಬುದು ನಮ್ಮೆಲ್ಲರ ಮಂತ್ರವಾಗಬೇಕು. ಅಭಿವೃದ್ಧಿಯ ಕ್ಷೇತ್ರದಲ್ಲಿ ಕೆಲಸಮಾಡುವ ಸರ್ಕಾರ ಹಾಗೂ ಸಂಸ್ಥೆಗಳು ಈ ನಿಟ್ಟಿನಲ್ಲಿ ತಮ್ಮ ಯೋಜನೆ ಗಳನ್ನು ರೂಪಿಸಿದರೆ, ಆರೋಗ್ಯವಂತ ಹಾಗೂ ಸುಶಿಕ್ಷಿತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ.

## ಯುವಸಮುದಾಯದ ಪಾತ್ರ

ಸ್ವಾಮಿ ವಿವೇಕಾನಂದರು ದೇಶದ ಏಳಿಗೆಗಾಗಿ ಯಾರ ಮೇಲೆ ತಮ್ಮ ಭರವಸೆಯನ್ನಿಟ್ಟಿದ್ದರೋ ಅಂತಹ ಯುವ ಸಮುದಾಯವನ್ನು ಈ ಎಲ್ಲಾ ಪ್ರಯತ್ನಗಳಲ್ಲಿ ಸಕ್ರಿಯವಾಗಿ ತೊಡಗಿಸಬೇಕು. ಈ ಯುವ ಜನಾಂಗವನ್ನು ದೃಷ್ಟಿಯಲ್ಲಿಟ್ಟು ಕೊಂಡು ಗ್ರಾಮೀಣ ಪ್ರದೇಶದಲ್ಲಿ ಸುಸ್ಥಿರವಾದ ಆದಾಯ ಸೃಷ್ಟಿಸುವ ಅವಕಾಶಗಳನ್ನು ಹೆಚ್ಚಿಸಬೇಕು. ಈ ಮೂಲಕ, ಗ್ರಾಮೀಣ ಯುವ ಉದ್ಯಮಿಗಳ ಸೃಷ್ಟಿಗೆ ನೆರವಾಗಬೇಕು. ಸ್ವಾಮೀಜಿ ಯವರು ಹೇಳಿದಂತೆ ಖಾಲಿ ಹೊಟ್ಟೆಯಲ್ಲಿ ಸೇವೆ ಮಾಡಲು ಸಾಧ್ಯವಿಲ್ಲ. ಯುವಕರನ್ನು ಆರ್ಥಿಕವಾಗಿ ಸಬಲರನ್ನಾಗಿಸಿದರೆ, ಇವರು ಇತರರ ಒಳಿತಿಗಾಗಿಯೂ ಚಿಂತಿಸುವಂತೆ ಮಾಡಲು ಸಾಧ್ಯ ಎಂಬುದನ್ನು ನಾವು ಮನಗಾಣಬೇಕು. ಯುವಕರಿಗೆ ಸರ್ವೇಸಾಮಾನ್ಯವಾಗಿ ಒಳಿತನ್ನು ಮಾಡುವ ಉತ್ಸಾಹ ಹಾಗೂ ಆಲೋಚನೆ ಇರುತ್ತದೆ. ಈ ಶಕ್ತಿಯನ್ನು ನಾವು ಅಭಿವೃದ್ಧಿ ಕ್ಷೇತ್ರದಲ್ಲಿ ಬಳಸಿಕೊಳ್ಳಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ಸಾಹಸ ಮನೋಭಾವದ, ಸಕಾರಾತ್ಮಕ ಬದಲಾವಣೆಯ ಯುವ

ಹುಂಕಾರವನ್ನು ಸೃಷ್ಟಿಸುವುದು ನಮ್ಮೆಲ್ಲರ ಮೊದಲ ಆದ್ಯತೆಯಾಗಬೇಕು.

ಈ ಎಲ್ಲ ಬದಲಾವಣೆಗಳೂ ಒಂದೇ ರಾತ್ರಿಯಲ್ಲಿ ಆಗುವಂತಹುದಲ್ಲ. ಇದು ತನ್ನದೇ ಆದ ವೇಗದಲ್ಲಿ ಹೋಗಲು ನಾವು ಅವಕಾಶ ಕೊಡಬೇಕು. ಈ ಪ್ರಯತ್ನದಲ್ಲಿ, 'ನಾವು ನಕ್ಷತ್ರಕ್ಕೆ ಏಣಿ ಹಾಕಿದರೆ ಚಂದ್ರನನ್ನಾದರೂ ತಲುಪಲು ಸಾಧ್ಯ' ಎಂಬ ಮನೋಭಾವದಿಂದ ಗುರಿಯೊಂದನ್ನು ಇಟ್ಟುಕೊಂಡು ಹೊರಡಬೇಕು. ಗುರಿಯೇ ಇಲ್ಲದಿದ್ದರೆ ದಾರಿಯೂ ಕಾಣುವುದಿಲ್ಲ.

## ಸಂಚಾಲಿತ ಶಕ್ತಿ

ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಆರಂಭವಾಗಿದೆ. ಪ್ರಸ್ತುತ ಅಭಿವೃದ್ಧಿಯ ಚಟುವಟಿಕೆಗಳಲ್ಲಿ ಸಮುದಾಯವು ನಮ್ಮೊಂದಿಗೆ ಸಹಭಾಗಿತ್ವ ಪಡೆದಿದೆ. ಕಳೆದ ೨೩ ವರ್ಷಗಳಲ್ಲಿ ನನ್ನ ಅನುಭವಕ್ಕೆ ಬಂದ ಅಂಶವೆಂದರೆ, ಸಹಭಾಗಿತ್ವವಷ್ಟೇ ಅಭಿವೃದ್ಧಿಗೆ ನೆರವಾಗುವುದಿಲ್ಲ ಎಂಬುದು. ಇದು ಸಮುದಾಯ ನಾಯಕತ್ವ ಹಾಗೂ ಸಮುದಾಯ ಸಂಚಾಲಿತ ಅಭಿವೃದ್ಧಿಯಾಗಬೇಕು. ಸಮುದಾಯದ ಆವಶ್ಯಕತೆಗಳು ಅವರಿಂದಲೇ ಗುರುತಿಸಲ್ಪಟ್ಟು, ಯೋಜನೆಗಳು ಅವರ ಪಾಲ್ಗೊಳ್ಳುವಿಕೆಯಿಂದಲೇ ಜಾರಿಗೆ ಬರಬೇಕು. ನಾವೆಲ್ಲರೂ ಇಂದಿನ ಸಂಪನ್ಮೂಲಗಳನ್ನು ನಾಳೆಗೆ ಉಳಿಸುವುದು ಮಾತ್ರವೇ ಸುಸ್ಥಿರ ಅಭಿವೃದ್ಧಿ ಎಂದುಕೊಂಡಿದ್ದೇವೆ. ಆದರೆ ಇದಕ್ಕೆ ಅದೇ ಸಮುದಾಯದ ಸಂಚಾಲಿತ ಶಕ್ತಿ ದೊರೆತರೆ ಇದು ಶಾಶ್ವತವಾಗಿ ಉಳಿದುಕೊಳ್ಳುವ ಸಂಪತ್ತಾಗುತ್ತದೆ ಎಂಬುದು ನನ್ನ ಸ್ಪಷ್ಟ ನಿಲುವಾಗಿದೆ.

## ನಿರಂತರ ಕಾಳಜಿ

ಸಂವಿಧಾನಾತ್ಮಕವಾಗಿ, ಅಭಿವೃದ್ಧಿಯನ್ನು ತನ್ನ ಅವಿಭಾಜ್ಯ ಕರ್ತವ್ಯ ಎಂದು ಸರ್ಕಾರ ತಿಳಿದುಕೊಂಡಿದೆ. ಆದರೆ ಸರ್ಕಾರವೊಂದೇ ಇದರಲ್ಲಿ ಪಾಲುಗಾರನಾದರೆ, ಅಭಿವೃದ್ಧಿ ಎನ್ನುವುದು ಒಂಟಿ ಗಾಲಿಯ ಬಂಡಿಯಂತಾಗುತ್ತದೆ.

ಆಳವಾಗಿ ಬೇರು ಬಿಟ್ಟ ಇಲ್ಲಿಯವರೆಗಿನ ಅಭಿವೃದ್ಧಿ ದೃಷ್ಟಿಕೋನಗಳನ್ನು ಬದಲಾಯಿಸುವುದು ಯಾರೋ ಒಬ್ಬಿಬ್ಬರಿಂದ ಆಗುವ ಕೆಲಸವಲ್ಲ. ಬದಲಿಗೆ ಸಮುದಾಯ, ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು ಹಾಗೂ ದೇಶದ ಆರ್ಥಿಕತೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿರುವ ಹಾಗೂ ಸಾಮಾಜಿಕ ಕಳಕಳಿಯುಳ್ಳ ಉದ್ಯಮಿಗಳು ಸಂಘಟಿತರಾಗಿ ಈ ಜವಾಬ್ದಾರಿಯನ್ನು ನಿರ್ವಹಿಸಬೇಕು. ಇವರೆಲ್ಲರಲ್ಲೂ ಅಭಿವೃದ್ಧಿಯೆಂಬುದು ತತ್‌ಕ್ಷಣಕ್ಕೆ ಬಂದುಹೋಗುವ ಆಲೋಚನೆಯಾಗದೆ ನಿರಂತರವಾದ ಕಾಳಜಿಯಾಗಬೇಕು.

ನನ್ನ ಕಲ್ಪನೆಯಲ್ಲಿ, ಈ ರೀತಿಯ ಬದಲಾವಣೆಗಳಾದಲ್ಲಿ ಮಾತ್ರ, ಗ್ರಾಮ ಮತ್ತು ಪಟ್ಟಣಗಳ ನಡುವಿನ ಅಂತರ ಕಡಿಮೆಯಾಗುತ್ತದೆ. ಹೀಗಾದಾಗ ಜನರ ವಲಸೆಯ ಒತ್ತಡ ಕಡಿಮೆಯಾಗಿ ಪರೋಕ್ಷವಾಗಿ ಪಟ್ಟಣಗಳ ಅಭಿವೃದ್ಧಿಯೂ ಆಗುತ್ತದೆ. ಪ್ರತಿ ಗ್ರಾಮವೂ ಸ್ವರ್ಗಕ್ಕೆ ಸಮಾನವಾಗಬೇಕು. ಇದಕ್ಕಾಗಿ ಶ್ರಮಿಸುವುದು ಪ್ರತಿಯೊಬ್ಬರ ಹಕ್ಕು ಮತ್ತು ಕರ್ತವ್ಯವಾಗಬೇಕು. ಒಟ್ಟಿನಲ್ಲಿ, ನಾಳಿನ ನಮ್ಮ ಮಕ್ಕಳಿಗೆ ಪ್ರಜ್ಞಾವಂತ ಸಮಾಜವನ್ನು ಉಳಿಸಲು ನಾವೆಲ್ಲರೂ ಇಂದೇ ಈಗಲೇ ಪ್ರಯತ್ನಿಸಬೇಕಿದೆ. ■

---

## ಪುಸ್ತಕ ಪರಿಚಯ

**ಅಮೋಘ ನಾಯಕ ಗಾಂಧೀ**
ಪ್ಯಾಸ್ಕಲ್ ಅಲೆನ್ ನಜರತ್
**ಕನ್ನಡ ಅನುವಾದ** : ನೀಲತ್ತಹಳ್ಳಿ ಕಸ್ತೂರಿ
**ಪ್ರಕಾಶಕರು:** ಸರ್ವೋದಯ ಇಂಟರ್ ನ್ಯಾಷನಲ್ ಟ್ರಸ್ಟ್
ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧೀ ಕೇಂದ್ರ
ಭಾರತೀಯ ವಿದ್ಯಾಭವನ – ಬೆಂಗಳೂರು
**ಪುಟ:** ೧೨೪, **ಬೆಲೆ:** ರೂ.೧೦೦/-

**ಸು**ಂದರವಾಗಿ ಮುದ್ರಿತವಾಗಿರುವ ಈ ಪುಸ್ತಕದಲ್ಲಿ ಗಾಂಧಿಯವರ ನಾಯಕತ್ವದ ಮೌಲ್ಯಮಾಪನ, ಸಂವಹನಾ ಕೌಶಲ, ಸಂಘಟನಾ ಕೌಶಲ, ವ್ಯೂಹರಚನಾ ಕೌಶಲ, ಆತ್ಮಶ್ರದ್ಧೆ, ದೇಶಭಕ್ತಿ ದೂರದೃಷ್ಟಿ, ನಾಯಕತ್ವದ ಸಾಧನೆಗಳು– ಇವನ್ನೆಲ್ಲ ಲೇಖಕರು ಪಟ್ಟಿ ಮಾಡಿದ್ದಾರೆ. ಪೂರಕವಾಗಿ ಸುಂದರವಾದ ಚಿತ್ರ, ಕಾರ್ಟೂನ್‌ಗಳನ್ನು ಶೇಖರಿಸಿದ್ದಾರೆ.

ಆದರೆ ಬಾಲ್ಯದಲ್ಲಿ ಗಾಂಧೀಜಿ ಯಾವ ನಾಯಕತ್ವದ ಗುಣಗಳನ್ನು ಹೊಂದಿದ್ದರು ಎಂಬುದನ್ನು ಗಮನಿಸಿದ ಲೇಖಕರು ಮುಂದೆ ಹೇಗೆ ಪೀಟರ್ ಮಾರಿಟ್ಸ್‌ಬರ್ಗ್‌ನ ರೈಲು ಪ್ರಕರಣದಿಂದ ಪ್ರಚೋದಿತರಾಗಿ ಅವರು ದಕ್ಷಿಣ ಆಫ್ರಿಕದ ಭಾರತೀಯ ಕೂಲಿಕಾರರು, ವರ್ತಕರನ್ನೇ ಸಂಘಟಿಸಿ ಸತ್ಯಾಗ್ರಹ ಎಂಬ ನೂತನ ಆಯುಧವನ್ನು ಆವಿಷ್ಕರಿಸಿ, ನಾಯಕರಾಗಿ ಸರ್ಕಾರವನ್ನೂ ಎದುರಿಸಿ ವಿಜೃಂಭಿಸಿದರು ಎಂಬುದನ್ನು ವಿವರಿಸುವ ಅವಕಾಶವನ್ನು ಉಪಯೋಗಿಸಿಲ್ಲ. ಹಾಗೆಯೇ ಗಾಂಧೀಜಿಯವರ ಜೀವನದಲ್ಲಿ ಅವರ ನಾಯಕತ್ವವು ಎಲ್ಲೆಲ್ಲಿ ಎಡವಿತು ಎಂಬುದರ ವಿಚಾರವನ್ನು ಈ ಪುಸ್ತಕದಲ್ಲಿ ಪ್ರಸ್ತಾಪಿಸಿಲ್ಲ.

ನೊಬೆಲ್ ಪುರಸ್ಕೃತರ ಮೇಲೆ ಗಾಂಧೀಜಿ ಮಾಡಿದ ಪ್ರಭಾವವನ್ನು ಚರ್ಚಿಸುವಾಗ ದಲೈಲಾಮ ಅವರ ಮಾತುಗಳನ್ನು ಮಾತ್ರ ಉದ್ಧರಿಸಿದ್ದಾರೆ. ಐನ್‌ಸ್ಟೈನ್ ಹೆಸರನ್ನೂ, ಆತನ ಪ್ರಸಿದ್ಧವಾದ Generation to come ....ಎಂದು ಆರಂಭವಾಗುವ ಹೇಳಿಕೆಯನ್ನೂ ಮರೆತಿದ್ದಾರೆ.

ನೀಲತ್ತಹಳ್ಳಿ ಕಸ್ತೂರಿ ಎಂದಿನಂತೆ ಸುಂದರವಾದ ಭಾಷಾಂತರ ಮಾಡಿದ್ದಾರೆ, ಆದರೆ ಅವರೂ *ಪ್ಲಸ್‌ಫೋರ್ಸ್–ಮೈನಸ್ ಫೋರ್ಸ್* ಪ್ರಕರಣವನ್ನು ಸರಿಯಾಗಿ ಅರ್ಥೈಸಿಲ್ಲ, ಡಾ. ಬಾಲಚಂದ್ರರಾವ್ ಪ್ರಕಾಶಕರ ಮಾತು, ನಮ್ಮ ಮಾತು ಎಂದು ಒಂದೇ ಪಠ್ಯವಸ್ತುವನ್ನು ಎರಡು ಸಲ ಕೊಟ್ಟಿದ್ದಾರೆ. ಏಕೆ? ಇಷ್ಟಾದರೂ ಶ್ರೀಮಂತವಾದ ಅಮೂಲ್ಯ ಮಾಹಿತಿಗಳ ಸಂಗ್ರಹವಾಗಿ ಈ ಪುಸ್ತಕ ಉಪಯೋಗಕರ.

**– ಎನ್. ಕೃಷ್ಣಸ್ವಾಮಿ, ಬೆಂಗಳೂರು**